ದಿನಾಂಕ ಃ 16-03-2023 ಓ ಎಸ್ ನಂ. 90/2017

ಡಿ. ಡಬ್ಲ್ಯೂ - 3

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಶ್ರೀ ವಿ ವೈ ಹೆಚ್ ವಾದಿ ಪರ ವಕೀಲರಿಂದಃ

ನರಸಪ್ಪ, ರಾಮಪ್ಪ, ಸಿದ್ದಪ್ಪ ನನ್ನ ಅಣ್ಣಂದಿರು. ಸದರಿಯವರು ದಾವಾ ಆಸ್ತಿಯಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನರಸಪ್ಪ, ರಾಮಪ್ಪ, ಸಿದ್ದಪ್ಪ ಇವರಿಗೆ 2 ಎಕರೆ 38 ಗುಂಟೆ ದಾವಾ ಆಸ್ತಿಯಲ್ಲಿ ಬಂದಿತ್ತು ಎಂದರೆ ಸರಿಯಲ್ಲ. ರಾಮಪ್ಪ ಶಿಂದೆ ಈತನು ನನ್ನ ಅಣ್ಣ ಆತನು 38 ಗುಂಟೆ ಜಮೀನನ್ನು ತೆಗೆದುಕೊಂಡು ಪ್ರತ್ಯೇಕವಾಗಿ ಇರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನರಸಪ್ಪ ಇವರ ಮಕ್ಕಳ ಹೆಸರಿನಲ್ಲಿ ಮತ್ತು ಸಿದ್ದಪ್ಪ ಇವನ ಮಗನ ಹೆಸರಿನಲ್ಲಿ ಇರುತ್ತದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸಿದ್ದಪ್ಪ ಈತನಿಗೆ 4 ನೇ ಪ್ರತಿವಾದಿಯು ಹೆಂಡತಿ ಎಂದರೆ ಸರಿ. ಸಿದ್ದಪ್ಪನಿಗೆ 4 ನೇಪ್ರತಿವಾದಿಯು 1 ನೇ ಹೆಂಡತಿ ಎಂದರೆ ಸರಿ. ಸದರಿ ಸಿದ್ದಪ್ಪನಿಗೆ ವಾದಿಯರು ಮಕ್ಕಳು ಎಂದರೆ ಸರಿ. ನಾನು ಮಾನ್ಯ ಪ್ರಧಾನ ದಿವಾಣಿ ನ್ಯಾಯಾಲಯ ಬೈಲಹೊಂಗಲ ಇಲ್ಲಿ ಅಸಲುದಾವಾ ನಂ.85/2022 ರಂತೆ ಪ್ರತಿವಾದಿ 1 ರಿಂದ 8 ರವರ ವಿರುದ್ಧ ಹಿಸ್ಸೆ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ 2 ಎಕರೆಗೆ ಸಂಬಂದಿಸಿದಂತೆ ಹಿಸ್ಸೆ ಕೇಳಿರುತ್ತೀಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 2 ಆಸ್ತಿಗೆ ಸಂಬಂದಿಸಿದಂತೆ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ 14 ಎಕರೆಯಲ್ಲಿ ಭಾಗವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಉತಾರವನ್ನು ನೋಡಿರುವುದಿಲ್ಲ. ಸದರಿ ದಾವಾ ಆಸ್ತಿಯ 14 ಎಕರೆಯನ್ನು ಶಿಂದೆ ಮನೆತನದವರು ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸಿಸುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಬೇರೆ ಬೇರೆ ಬ್ಯಾಂಕಿನಲ್ಲಿ ದಾವಾ ಆಸ್ತಿಯನ್ನು ಅಡಮಾನ ಮಾಡಿ ಸಾಲ ಪಡೆದಿರುತ್ತಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯರು ಪ್ರಸ್ತುತ ದಾವೆಯನ್ನು ಮಾಡುವುದಕ್ಕಿಂತ ಮೊದಲು ದಾವಾ ಆಸ್ತಿಯಲ್ಲಿ ವಿಭಾಗ ಆಗಿರುವುದಿಲ್ಲ ಎಂದು ಯಾರೂ ಸಹಾ ದಾವೆಯನ್ನು ಮಾಡಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ದಾವಾ ಆಸ್ತಿಯಲ್ಲಿ ವಿಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು 1 ಮತ್ತು 6 ರಿಂದ 8 ನೇ ಪ್ರತಿವಾದಿಯರ ಮಾತುಕೇಳಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಆಸ್ತಿಯನ್ನು ಕೊಡಬೇಕಾಗುತ್ತದೆ ಎಂದು



ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದಪ್ಪ ಮರಣಹೊಂದಿದ ನಂತರ ವಾದಿಯರಿಗೆ ಗೊತ್ತಾಗದ ಹಾಗೆ 1 ನೇ ಪ್ರತಿವಾದಿಯು ತನ್ನ ಹೆಸರನ್ನು ದಾವಾ ಆಸ್ತಿಯಲ್ಲಿ ದಾಖಲಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

ವಾದಿಯರಿಗೆ ದಾವಾ ಆಸ್ತಿಯಲ್ಲಿ ಪಾಲು ಹೋಗಬೇಕೋ ಬೇಡವೋ ಎನ್ನುವ ಪ್ರಶ್ನೆಗೆ ಸಾಕ್ಷಿಯು ವಾದಿಯರಿಗೂ ಹಾಗೂ ನನಗೂ ಕೂಡಾ ಪಾಲು ಬರಬೇಕು ಎಂದು ನುಡಿಯತ್ತಾರೆ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ**